ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2018–19 : ದಿನಾಂಕ : 19–07–2018

# ಪತ್ರಿಕಾ ಆಮಂತ್ರಣ

1) ಪೂರ್ಣಚಂದ್ರ ತೇಜಸ್ವಿಯವರ ಡಾ: ಬಿ.ಎ ವಿವೇಕ ರೈ ಹಾಗೂ ಕತ್ರೀನ್ ಬ್ಯೆಂದರ್ ಅನುವಾದಿಸಿರುವ ಕರ್ವಾಲೋ ಕಾದಂಬರಿಯ ಜರ್ಮನ್ ಅನುವಾದ ಕೃತಿ ಬಿಡುಗಡೆ.

ದಿನಾಂಕ: 20–7–2018, ಶುಕ್ರವಾರ, ಸಮಯ: ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

## ಪತ್ರಿಕಾ ಪ್ರಕಟಣೆ

ಸಂಖ್ಯೆ690/790

## ದಲಿತ ಕ್ರೈಸ್ತ ಸಾಂಸ್ಕೃತಿಕ ಶೋಧ ಮಾಲೆಯಡಿ 11 ಸಂಪುಟ ಪ್ರಕಟ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ದಲಿತ ಕ್ರೈಸ್ತ ಸಾಂಸ್ಕೃತಿಕ ಶೋಧ ಮಾಲೆಯಡಿ ಸುಮಾರು 11 ಸಂಪುಟಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಹೊರತರುತ್ತಿರುವುದು ಒಳ್ಳೆಯ ಸಂಗತಿಯಾಗಿದೆ ಎಂದು ಖ್ಯಾತ ಸಾಹಿತಿ ಡಾ: ನಾ. ಡಿಸೋಜ ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ಇಂದು ಕನ್ನಡ ಭವನದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಹಮ್ಮಿಕೊಳ್ಳಲಾದ ದಲಿತ ಕ್ರೈಸ್ತ ಸಾಂಸ್ಕೃತಿಕ ಶೋಧ ಮಾಲೆ ಸಮೂಹ ಮಂಥನ ಮತ್ತು ಸಂವಾದ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿದರು.

ದಲಿತರು ಬದುಕಿನಲ್ಲಿ ಕಂಡ ನೈಜ ಸಂಗತಿಗಳನ್ನು ಹಂಚಿಕೊಳ್ಳುವುದು ಬಹಳ ಮುಖ್ಯವಾಗಿದೆ. ಇವರ ಬಗ್ಗೆ ಶೋಧನೆ ಹಿಂದೆಯೇ ನಡೆಯಬೇಕಿದ್ದು, ಈಗ ಈ ಸಂಶೋಧನೆ ಬಗ್ಗೆ ಸಂಪುಟಗಳನ್ನು ತರುತ್ತಿರುವುದು ಸ್ವಾಗತಾರ್ಹ. ದಲಿತರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಸಂದರ್ಭದಲ್ಲಿ ಅವರ ಮನಸ್ಸಿನಲ್ಲಾದ ತಳಮಳ, ಸಾಮಾಜಿಕ, ನೈತಿಕ, ಧಾರ್ಮಿಕ ವಿಷಯಗಳ ಬಗ್ಗೆ ಬೆಳಕು ಚೆಲ್ಲಲು ಇದು ವೇದಿಕೆಯಾಗಬಲ್ಲದು. ಜಾತಿ ತೊಡೆದು ಹಾಕಿ ಬಾಳ್ವೆ ನಡೆಸಲು ಮುಂದಾಗಿರುವ ಈ ಸಮಾಜದ ನಡುವೆಯೇ ಇನ್ನೂ ಜಾತಿ ಪದ್ದತಿ ಮುಂದುವರೆದಿದೆ. ಈ ಸತ್ಯವನರನ್ನು ನಾವು ಎದುರಿಸಲೇಬೇಕಾಗಿದೆ.

ಸತ್ಯ ಸಂಗತಿಗಳ ಆಧಾರದ ಮೇಲೆ ಸಂಶೋಧನೆ ನಡೆಸಿ ಸೂಕ್ತ ಫಲಿತಾಂಶದ ನಿರೀಕ್ಷೆ ಮಾಡಬೇಕಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ಕ್ರೈಸ್ತ ಮಿಷನರಿಗಳು ಧರ್ಮದ ಪ್ರಚಾರದ ಜೊತೆಗೆ ಹಲವಾರು ದಲಿತರನ್ನು ತಮ್ಮ ಧರ್ಮಕ್ಕೆ ಮತಾಂತರಿಸಿದರು. ಮತಾಂತರಗೊಂಡ ಕ್ರೈಸ್ತರು ಹಾಗೂ ನೈಜ ಕ್ರೈಸ್ತರ ನಡುವೆ ತಾರತಮ್ಯ ಧೋರಣೆ ತೋರಲಾಯಿತು. ಇವರಿಗೆ ಯಾವುದೇ ಮೀಸಲಾತಿ ಕಲ್ಪಿಸಿರಲಿಲ್ಲ. ಇವರು ಕೀಳರಿಮೆಯಿಂದ ನಲುಗಿದರು ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಅರವಿಂದ ಮಾಲಗತ್ತಿ ಅವರು ದಲಿತ ಕ್ರೈಸ್ತ ಸಾಂಸ್ಕೃತಿಕ ಶೋಧ ಮಾಲೆ ಸಮೂಹ ಮಂಥನ ರಾಜ್ಯದ 4 ವಿಭಾಗಗಳಾದ ಬೆಂಗಳೂರು, ಮೈಸೂರು, ಕಲಬುರಗಿ ಹಾಗೂ ಬೆಳಗಾವಿ ವಿಭಾಗಗಳಲ್ಲಿ ನಡೆಯಲಿದೆ. ಇಲ್ಲಿ ವಿಭಾಗವಾರು ಸಮುಹ ಮಂಥನ ಕ್ಷೇತ್ರಕಾರ್ಯ ಹಾಗೂ ಅಧ್ಯಯನಗಳು ನಡೆಯಲಿದೆ. ಇಲ್ಲಿ ವಿಭಾಗವಾರು ತಲಾ ಒಬ್ಬರು ಸಂಪಾದಕರು ಹಾಗೂ ಎಲ್ಲಾ ಜಿಲ್ಲೆಗಳಿಂದ ಸಂಶೋಧಕರನ್ನು ಗುರುತಿಸಲಾಗಿದೆ. ಇವರು ಮೇಲ್ಕಂಡ ವಿಷಯ ಕುರಿತು ತಮ್ಮ ಜಿಲ್ಲೆಗಳ ಸಾಂಸ್ಕೃತಿಕ ಚಿಂತನೆಯನ್ನು ಸಿದ್ದಪಡಿಸಿ ನೀಡುವರು. ಇದನ್ನು 10 ಸಂಪುಟಗಳಲ್ಲಿ ಸಿದ್ದಪಡಿಸಿ, 11 ನೇ ಸಂಪುಟದಲ್ಲಿ ಈ ಅಧ್ಯಯನದ ಪೂರ್ಣ ಸಾರಾಂಶ ಹಾಗೂ ಗಮನಿಸಲಾದ ಅಂಶಗಳನ್ನು ಪ್ರಕಟಿಸಲಾಗುವುದು. ಮುಂದಿನ 2 ವರ್ಷದೊಳಗೆ ಈ ಅಧ್ಯಯನ ಪೂರ್ಣಗೊಳ್ಳಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಶೋಧನೆ ಮಾಲಿಕೆಯ ಸಂಯೋಜಕರಾದ ಡಾ. ಕೆ. ಖಂಡೋಬಾ, ಡಾ: ಪ್ರಶಾಂತ್ ನಾಯಕ್, ಅಕಾಡೆಮಿ ರಿಜಿಸ್ಟ್ರಾರ್ ಕರಿಯಪ್ಪ ಅವರು ಉಪಸ್ಥಿತರಿದ್ದರು. ಸಾಹಿತಿಗಳಾದ ಡಾ. ಬೈರಮಂಗಳ ರಾಮೇಗೌಡ ಕಾರ್ಯಕ್ರಮ ನಿರೂಪಿಸಿದರು.

ಸಂಖ್ಯೆ691/791

# ಶಿರೂರು ಶ್ರೀಗಳ ನಿಧನಕ್ಕೆ ಸಚಿವ ದೇಶಪಾಂಡೆ ಸಂತಾಪ

**ಬೆಂಗಳೂರು, ಜುಲೈ 19 (ಕರ್ನಾಟಕ ವಾರ್ತೆ)–**

**ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಶಿರೂರು ಮಠದ ಮುಖ್ಯಸ್ಥರಾಗಿದ್ದ ಶ್ರೀ ಲಕ್ಷ್ಮೀವರತೀರ್ಥ ಶ್ರೀಗಳ ನಿಧನಕ್ಕೆ ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಆರ್.ವಿ.ದೇಶಪಾಂಡೆ ಕಂಬನಿ ಮಿಡಿದಿದ್ದಾರೆ.**

**ಆಧ್ಯಾತ್ಮಿಕ ಸಾಧನೆಯ ಜೊತೆಗೆ ಸಾಮಾಜಿಕ ಕಳಕಳಿಯನ್ನು ಹೊಂದಿದ್ದ ಶ್ರೀಗಳು, ಸಮಕಾಲೀನ ಸಮಾಜದ ಆಗುಹೋಗುಗಳಿಗೂ ಸ್ಪಂದಿಸುತ್ತಿದ್ದರು. ಅವರ ಅಕಾಲಿಕ ನಿಧನದಿಂದಾಗಿ ಭಕ್ತರು ಸಮರ್ಥ ಮಾರ್ಗದರ್ಶಕರೊಬ್ಬರನ್ನು ಕಳೆದುಕೊಂಡಂತಾಗಿದೆ ಎಂದು ಸಚಿವರು ತಮ್ಮ ಶೋಕಸಂದೇಶದಲ್ಲಿ ದುಃಖಿಸಿದ್ದಾರೆ.**

**ಶ್ರೀಲಕ್ಷೀವರತೀರ್ಥರು ತಮ್ಮ ಸಾಂಸ್ಕೃತಿಕ ಆಸಕ್ತಿಯಿಂದಲೂ ಗಮನ ಸೆಳೆದಿದ್ದರು. ಚಿಕ್ಕ ವಯಸ್ಸಿನಲ್ಲೇ ಯತಿಗಳಾದ ಅವರು ಪರಂಪರೆ ಮತ್ತು ಆಧುನಿಕತೆಯ ಸಮನ್ವಯದಂತಿದ್ದರು ಎಂದು ಆರ್.ವಿ.ದೇಶಪಾಂಡೆ ನೆನಪಿಸಿಕೊಂಡಿದ್ದಾರೆ.**

**ಶ್ರೀಗಳ ನಿಧನದಿಂದ ಉಂಟಾಗಿರುವ ದುಃಖವನ್ನು ಭರಿಸಿಕೊಳ್ಳುವ ಶಕ್ತಿಯನ್ನು ಭಗವಂತನು ಅವರ ಭಕ್ತರಿಗೆ ದಯಪಾಲಿಸಲಿ ಎಂದು ಅವರು ಸಂತಾಪ ಸಂದೇಶದಲ್ಲಿ ಹೇಳಿದ್ದಾರೆ.**

ಸಂಖ್ಯೆ692/792

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಜುಲೈ 19 (ಕರ್ನಾಟಕ ವಾರ್ತೆ)–**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 22-07-2018** ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

ಬೆಳಿಗ್ಗೆ 6.30 ಗಂಟೆಯಿಂದ 7.30 ಗಂಟೆಯವರೆಗೆ ಮಿಲಿಟರಿ ಪೊಲೀಸ್ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಪೊಲೀಸ್ ಬ್ಯಾಂಡ್**" ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.ಬೆಳಿಗ್ಗೆ 7.30 ಗಂಟೆಯಿಂದ 8.30 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಶ್ರೀಮತಿ ಸೌಮ್ಯ ಜಗನ್ ಮೂರ್ತಿ ರವರಿಂದ ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸಂಖ್ಯೆ693/793

## ವಿಪತ್ತು ನಿರ್ವಹಣೆಯಲ್ಲಿ ಮನೋ ಸಾಮಾಜಿಕ ಆರೈಕೆ-ಕಾರ್ಯಗಾರ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

**ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ವತಿಯಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಅಗ್ನಿಶಾಮಕ ಮತ್ತು ಗೃಹ ರಕ್ಷಕ ದಳ/ಪೌರ ರಕ್ಷಣ ದಳ, ಪೊಲೀಸ್ ಇಲಾಖೆ ಹಾಗೂ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಸ್ವಯಂ ಸೇವಕರು ಮತ್ತು ಇತರರಿಗೆ ಒಂದು ದಿನದ "ವಿಪತ್ತು ನಿರ್ವಹಣೆಯಲ್ಲಿ ಮನೋ ಸಾಮಾಜಿಕ ಆರೈಕೆ" ಕಾರ್ಯಾಗಾರವನ್ನು ಇಂದು ವಿಕಾಸಸೌಧದಲ್ಲಿ ಹಮ್ಮಿಕೊಂಡಿತ್ತು.**

**ವಿಪತ್ತು ನಿರ್ವಹಣೆಯಲ್ಲಿ "ಮನೋ ಸಾಮಾಜಿಕ ಆರೈಕೆ" ಎಂಬ ವಿಷಯವನ್ನು ಅತ್ಯಂತ ಗಂಭೀರ ವಿಷಯವೆಂದು ಪರಿಗಣಿಸಿ ಇಂತಹ ವಿಷಯವನ್ನು ರಾಜ್ಯದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ವಿಪತ್ತು ನಿರ್ವಹಣೆಯಲ್ಲಿ (ವಿಪತ್ತಿನ ಮುನ್ನ, ವಿಪತ್ತಿನ ಕಾಲದಲ್ಲಿ ಮತ್ತು ವಿಪತ್ತಿನ ನಂತರ) ತಾಂತ್ರಿಕತೆಗಳನ್ನು ಬಹಳ ವಿಶೇಷವಾಗಿ ಬೆಂಗಳೂರಿನ ನಿಮ್ಹಾನ್ಸ್ ಸಂಸ್ಥೆಯ ಅಧಿಕಾರಿಗಳು ತಯಾರಿಸಿರುತ್ತಾರೆ.**

**ಇದರ ಬಗ್ಗೆ ಅರಿವನ್ನು ಮೂಡಿಸುವ ಕಾರ್ಯಗಾರದ ಮುಖ್ಯ ಉದ್ದೇಶವಾಗಿರುತ್ತದೆ. ಇಂತಹ ವಿಷಯಗಳಲ್ಲಿ ಅಧಿಕಾರಿಗಳಿಗೆ ವಿಪತ್ತು ನಿರ್ವಹಣೆಯಲ್ಲಿ ತಮ್ಮ ಸಾಮರ್ಥ್ಯಾಭಿವೃದ್ಧಿಗಳನ್ನು ಹೆಚ್ಚಿಸಿದಲ್ಲಿ ಮುಂಬರುವ ವಿಪತ್ತುಗಳನ್ನು ಸಮರ್ಥವಾಗಿ ನಿಭಾಯಿಸಿ ಸಂಭಾವನೀಯ ಸಾವು-ನೋವುಗಳನ್ನು, ಆಸ್ತಿಯನ್ನು ರಕ್ಷಿಸುವಲ್ಲಿ ಬಹಳ ಹೆಚ್ಚಿನ ಉಪಯೋಗವಾಗುತ್ತದೆ.**

**ರಾಜ್ಯದ ವಿಪತ್ತುಗಳು ಹಾಗೂ ವಿಪತ್ತು ನಿರ್ವಹಣೆ ಸಿದ್ದತೆ ಮತ್ತು ಪ್ರತಿಕ್ರಿಯೆಯ ಸಂಕ್ಷಿಪ್ತ ಮುನ್ನೋಟ. ವಿಪತ್ತುಗಳಿಂದಾಗಿ ಬದುಕುಳಿದವರ ಮತ್ತು ಅವರ ಕುಟುಂಬಗಳಿಗೆ ವಿಪತ್ತಿನಿಂದ ಆಘಾತಕ್ಕೆ**

ಒಳಗಾಗಿ ಮಾನಸಿಕ ವ್ಯಥೆಯಿಂದ ಸಾಮಾಜಿಕ ಬದುಕನ್ನು ನಿರ್ವಹಿಸಲು ಕಷ್ಟವಾಗಿರುತ್ತದೆ. (ವಿಪತ್ತಿನಿಂದ ಬದುಕುಳಿದ ಸುಮಾರು ಶೇ. 10-15 ರಷ್ಟು ಜನರು ಇಂತಹ ಅಘಾತಕ್ಕೆ ತುತ್ತಾಗುತ್ತಾರೆಂದು ನಿಮ್ಹಾನ್ಸ್ ಬೆಂಗಳೂರು ಸಂಸ್ಥೆಯು ತನ್ನ ಸಂಶೋಧನೆಯಲ್ಲಿ ಧೃಢಪಡಿಸಿರುತ್ತದೆ.)

ರಾಷ್ಟ್ರೀಯ ವಿಪತ್ತು ನಿರ್ವಹಣ ಕಾಯ್ದೆ 2005 ಬಂದ ನಂತರ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು 2009 ರಲ್ಲಿ ಸ್ಥಾಪನೆಯಾಗಿದ್ದು, ಪ್ರಾಧಿಕಾರದ ಅಧ್ಯಕ್ಷರು ಮುಖ್ಯಮಂತ್ರಿಗಳಾಗಿದ್ದು ಇತರ ಹಲವಾರು ಸಂಪುಟ ದರ್ಜೆ ಮಂತ್ರಿಗಳು ಇದರ ಸದಸ್ಯರುಗಳಾಗಿರುತ್ತಾರೆ.

ಪ್ರಾಧಿಕಾರದ ಮೂಲ ಉದ್ದೇಶ ಕರ್ನಾಟಕ ರಾಜ್ಯದಲ್ಲಿ ವಿಪತ್ತು ನಿರ್ವಹಣೆಯನ್ನು ಪ್ರಮುಖ ಜವಾಬ್ದಾರಿಯುತವಾಗಿ ನಿರ್ವಹಿಸಬೇಕಾಗಿರುತ್ತದೆ. (ವಿಪತ್ತಿನ ಮುನ್ನ, ವಿಪತ್ತಿನ ಕಾಲದಲ್ಲಿ ಮತ್ತು ವಿಪತ್ತಿನ ನಂತರ) ಇದರ ಕುರಿತು ಅಣುಕು ಪ್ರದರ್ಶನ ಸಹ ಏರ್ಪಡಿಸುತ್ತಾ ಬರಲಾಗಿದೆ. ಈ ಕಾರ್ಯಕ್ರಮಗಳನ್ನು ನಿರಂತರವಾಗಿ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲಿ ಎಲ್ಲಾ ಇಲಾಖೆಯ ಹಾಗೂ ಎಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿಗಳಿಗೆ ನಿರಂತವಾಗಿ ತರಬೇತಿ ಕೊಡುವುದರ ಜೊತೆಗೆ ವಿಪತ್ತು ನಿರ್ವಹಣೆಯನ್ನು ಸಮರ್ಥವಾಗಿ ನಿಭಾಯಿಸಲು ಹಲವಾರು ಸಂಪನ್ಮೂಲ ಉಪಕರಣಗಳನ್ನು ಆಯಾಯ ಇಲಾಖೆಗಳಿಗೆ ಒದಗಿಸಿ ಕೊಡಲಾಗುತ್ತಿದೆ.

ಈ ಕಾರ್ಯಾಗಾರದಲ್ಲಿ ಡಾ: ಜಿ. ವಿಶ್ವನಾಥ್, ಡಾ: ಜಿ.ಎಸ್. ಶ್ರೀನಿವಾಸ ರೆಡ್ಡಿ, ನಿರ್ದೇಶಕರು, ಕೆಎಸ್ಎನ್‌ಡಿಎಂಸಿ, ಶ್ರೀಮತಿ ಮಿಲಾನ್ ಮಂದಣ್ಣ, ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಯ ಡಾ: ಸಂಜೀವ್‌ಕುಮಾರ್ ಮಾತನಾಡಿದರು.

ಸಂಖ್ಯೆ694/794

## 2018-19 ನೇ ಸಾಲಿನ ವಿದ್ಯಾರ್ಥಿ ಬಸ್ ವಿತರಣೆ

ಬೆಂಗಳೂರು, ಜುಲೈ 18 (ಕರ್ನಾಟಕ ವಾರ್ತೆ)

ಬೆಂ.ಮ.ಸಾ.ಸಂಸ್ಥೆಯು ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಸದರಿ ವಿದ್ಯಾರ್ಥಿ ರಿಯಾಯಿತಿ ಪಾಸಿನ ಸೌಲಭ್ಯವು ಎಲ್ಲಾ ವಿದ್ಯಾರ್ಥಿಗಳಿಗೂ ತಲುಪಿಸುವ ದೃಷ್ಟಿಯಿಂದ ಹಾಗೂ ವಿದ್ಯಾರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸುವ ವ್ಯವಸ್ಥೆಯನ್ನು ಸಂಸ್ಥೆಯು ಜಾರಿಗೆ ತಂದಿರುತ್ತದೆ.

ಭರ್ತಿ ಮಾಡಿ, ಶಾಲಾ/ಕಾಲೇಜಿನ ಮುಖ್ಯಸ್ಥರಿಂದ ದೃಢೀಕರಿಸಿ ಬಸ್ ನಿಲ್ದಾಣಗಳಲ್ಲಿ ಸಲ್ಲಿಸುವುದನ್ನು ತಪ್ಪಿಸುವ ಸಲುವಾಗಿ ಹಾಗೂ ವಿದ್ಯಾರ್ಥಿಗಳು ಬಸ್‌ಪಾಸಿಗಾಗಿ ಬಸ್‌ನಿಲ್ದಾಣಗಳಲ್ಲಿ ಹೆಚ್ಚಿನ ಹೊತ್ತು ಸರದಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸುವ ಸಲುವಾಗಿ ಆನ್‌ಲೈನ್ ಮೂಲಕ ಸಲ್ಲಿಸುವ ವ್ಯವಸ್ಥೆಯನ್ನು ಸಂಸ್ಥೆಯು ಜಾರಿಗೆ ತರಲಾಗಿದೆ.

ಇದು ಶಿಕ್ಷಣ ಇಲಾಖೆಯ ಡೆಟಾಬೇಸ್‌ನೊಂದಿಗೆ ನೇರ ಸಂಪರ್ಕ ಹೊಂದಿರುತ್ತದೆ. ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳ ಮೂಲಕ ಅರ್ಜಿ ಸಲ್ಲಿಸಬಹುದು ಅಥವಾ ವಿದ್ಯಾರ್ಥಿಗಳೇ ನೇರವಾಗಿ ಇ-ಫಾರಂ ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ವಿದ್ಯಾರ್ಥಿ ಬಸ್‌ಪಾಸಿಗಾಗಿ ಅರ್ಜಿ ಸಲ್ಲಿಸುವ ವಿವರವು ಈ ಕೆಳಕಂಡಂತಿದೆ.

**ವಿದ್ಯಾರ್ಥಿ ಬಸ್ ಪಾಸಿಗಾಗಿ ಅರ್ಜಿ ಸಲ್ಲಿಸಲು ಈ ಕೆಳಕಂಡ ವಿಧಾನಗಳನ್ನು ಅನುಸರಿಸುವುದು.**

| ವಿಧ | ಶಿಕ್ಷಣ ಸಂಸ್ಥೆಗಳ ಮೂಲಕ | ಬೆಂ.ಮ.ಸಾ.ಸಂಸ್ಥೆಯ ಇ–ಫಾರಂ ವ |
|---|---|---|
| **10ನೇ ತರಗತಿಯವರೆಗೆ** | • ವಿದ್ಯಾರ್ಥಿಯು ಶಾಲೆಗೆ ದಾಖಲಾಗುವ ಸಮಯದಲ್ಲಿ ಶಾಲೆಯ ಅಧಿಕಾರಿಗಳಲ್ಲಿ ಬಸ್ ಪಾಸಿಗಾಗಿ ಕೋರುವುದು.<br>• ಶಾಲೆಯ ಅಧಿಕಾರಿಗಳು ಬೆಂ.ಮ.ಸಾ.ಸಂಸ್ಥೆಯ ಬಸ್ ಪಾಸಿಗಾಗಿ SATS ಸಾಫ್ಟ್‌ವೇರ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.<br>**ಪಾಸಿನ ಶುಲ್ಕ:**<br>ವಿದ್ಯಾರ್ಥಿಗಳು ಪಾಸಿನ ಸೇವಾ ಶುಲ್ಕವನ್ನು ಶಾಲೆಯ ಅಧಿಕಾರಿಗಳ ಬಳಿ ಈ ಕೆಳಕಂಡಂತೆ ಪಾವತಿಸುವುದು.<br>1 ರಿಂದ 7ನೇ ತರಗತಿಯವರೆಗೆ –ರೂ.150/–<br>**ವಿತರಣೆ:**<br>ಶಾಲೆಯ ಅಧಿಕಾರಿಗಳು SATS ಸಾಫ್ಟ್‌ವೇರ್ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ, ಬೆಂ.ಮ.ಸಾ.ಸಂಸ್ಥೆಯು ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಣಗೊಳಿಸಿ ಈ ಕೆಳಕಂಡಂತೆ ವಿತರಣೆ ಮಾಡಲಾಗುತ್ತದೆ.<br>• 7 ನೇ ತರಗತಿಯವರೆಗೆ ಬೆಂ.ಮ.ಸಾ.ಸಂಸ್ಥೆಯ ಸಿಬ್ಬಂದಿಗಳ ಮೂಲಕ ಸಂಬಂಧಿಸಿದ ಶಾಲೆಗಳಿಗೆ ರವಾನಿಸಲಾಗುವುದು.<br>• **8 ರಿಂದ 10ನೇ ತರಗತಿಯವರೆಗೆ:** ವಿದ್ಯಾರ್ಥಿಯ ವಿಳಾಸಕ್ಕೆ ಅಂಚೆಯ ಮೂಲಕ ನೇರವಾಗಿ ರವಾನಿಸಲಾಗುವುದು. ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಪಾಸಿನ ವಿತರಣೆಯ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು.<br>• ಬಾಲಕಿಯರಿಗೆ – ರೂ.600/–<br>• ಬಾಲಕರಿಗೆ – ರೂ.800/–<br>• ಎಸ್‌ಸಿ/ಎಸ್‌ಟಿ– ರೂ.200/– | **ಮೊಬೈಲ್‌ನಲ್ಲಿ ಐ.ವಿ.ಆರ್. ಮೂಲಕ**<br>• ಮೊಬೈಲ್‌ನಲ್ಲಿ 161 ಕರೆ ಮಾಡ<br>• ಕನ್ನಡ ಅಥವಾ ಇಂಗ್ಲೀಷ ಮಾಡಿಕೊಳ್ಳುವುದು.<br>• ಬೆಂ.ಮ.ಸಾ.ಸಂಸ್ಥೆಯ ಸೇವೆಗ ಆಯ್ಕೆ ಮಾಡಿಕೊಳ್ಳುವುದು.<br>• ವಿದ್ಯಾರ್ಥಿ ಪಾಸಿಗಾಗಿ 2 ಅ ಮಾಡಿಕೊಳ್ಳುವುದು.<br>• ವೆಬ್‌ಲಿಂಕ್ ಮೂಲಕ ರಿಯಾಯಿತಿ ಪಾಸಿನ ವಿದ್ಯಾರ್ಥಿಯ ರವಾನಿಸಲಾಗುವುದು.<br>**ನೇರವಾಗಿ ವೆಬ್‌ಲಿಂಕ್ ಮೂಲಕ:**<br>• **ಪರ್ಯಾಯವಾಗಿ,** ವಿ www.mybmtc.com ಗೆ ತೆರಳಿ ಮೂಲಕವು ಅರ್ಜಿಯನ್ನು ಸಲ್ಲಿಸಬ<br>**ಅರ್ಜಿ ಸಲ್ಲಿಸುವ ಪ್ರಕ್ರಿಯೆ:**<br>• ವಿದ್ಯಾರ್ಥಿಗಳು ವೆಬ್‌ಲಿಂಕ್‌ನಲ್ಲಿ ಪಾಸಿನ ಅರ್ಜಿಯನ್ನು ಪಡೆಯುವು<br>• ಸದರಿ ಇ–ಫಾರಂ ನಲ್ಲಿ ವಿ ಎನ್‌ರೋಲ್‌ಮೆಂಟ್ ಸಂಖ್ಯೆಯನ ಹುಟ್ಟಿದ ದಿನಾಂಕವನ್ನು ನಮೂದಿಸ<br>• ವಿದ್ಯಾರ್ಥಿಯ ಎನ್‌ರೋಲ್‌ಮೆಂ ಮತ್ತು ಹುಟ್ಟಿದ ದಿನಾಂಕವನ್ನು ಕೂಡಲೇ SATS ನಲ್ಲಿನ ವಿವರಗಳು ಸ್ವಯಂಚಾಲಿತ ಮುದ್ರಿ<br>• ಸ್ವಯಂಚಾಲಿತವಾಗಿ ವಿವರಗಳು ನಂತರ ವಿದ್ಯಾರ್ಥಿಯು ಸದರಿ ಪರಿಶೀಲಿಸಿ, ಪೋಷಕರ ದೂರವ ಮತ್ತು ಇ–ಮೇಲ್ ನಮೂದಿಸುವುದು. ಒಂದು ಸ್ವಯಂಮುದ್ರಿತವಾಗಿರುವ |

| | | |
|---|---|---|
| | | ತಪ್ಪಾಗಿದ್ದಲ್ಲಿ ಶಾಲೆಯ ಅಧಿಕಾರಿಗಳ ಬಳಿ ಅದನ್ನು ಸರಿಪಡಿಸಿ ನಂತರ ಅರ್ಜಿ ಸಲ್ಲಿಸುವುದು.<br>• ಸ್ವಯಂಚಾಲಿತವಾಗಿ ಮುದ್ರಿತವಾಗಿರುವ ವಿವರಗಳು ಸರಿಯಾಗಿದ್ದಲ್ಲಿ, ವಿದ್ಯಾರ್ಥಿಯು ಮುಂದಿನ ಅಂಕಣಕ್ಕೆ ತೆರಳಿ ಎಲ್ಲಿಂದ–ಎಲ್ಲಿಗೆ ಮತ್ತು ಮಾರ್ಗದ ಬಸ್ ನಿಲ್ದಾಣವನ್ನು ನಮೂದಿಸುವುದು.<br>• ಬಸ್ ನಿಲ್ದಾಣದ ಮಾಹಿತಿಯನ್ನು ನಮೂದಿಸಿದ ನಂತರ 1MB ಗಿಂತಲೂ ಹೆಚ್ಚಿಲ್ಲದ ಭಾವಚಿತ್ರವನ್ನು ಅಪ್‌ಲೋಡ್ ಮಾಡುವುದು.<br>• ಮೇಲ್ಕಂಡ ಎಲ್ಲಾ ಹಂತಗಳು ಮುಕ್ತಾಯವಾದ ನಂತರ ವಿದ್ಯಾರ್ಥಿಯು ಅರ್ಜಿಯನ್ನು ಸಲ್ಲಿಸುವುದು ಹಾಗೂ ಅರ್ಜಿಯ ಸಂಖ್ಯೆಯನ್ನು ಪಡೆಯುವುದು.<br>**ಪಾಸಿನ ಶುಲ್ಕ:**<br>• 7ನೇ ತರಗತಿಯವರೆಗೆ ವಿದ್ಯಾರ್ಥಿಗಳು ರೂ.200/– ಪಾಸನ್ನು ಸ್ವೀಕರಿಸುವ ಸಂಥರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು.<br>• 8 ರಿಂದ 10ನೇ ತರಗತಿಯವರೆಗೆ: ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಪಾಸಿನ ವಿತರಣೆಯ ಸಂಥರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು.<br>• ಬಾಲಕಿಯರಿಗೆ – ರೂ.600/–<br>• ಬಾಲಕರಿಗೆ – ರೂ.800/–<br>• ಎಸ್‌ಸಿ/ಎಸ್‌ಟಿ– ರೂ.200/–<br>**ವಿತರಣೆ:**<br>• ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಕಾರ್ಡ್‌ಗಳನ್ನು ನೇರವಾಗಿ ವಿದ್ಯಾರ್ಥಿಯ ವಿಳಾಸಕ್ಕೆ ಅಂಚೆಯ ಮೂಲಕ ರವಾನಿಸಲಾಗುವುದು. ಪಾಸಿನ ಮೊತ್ತವನ್ನು ಸ್ಮಾರ್ಟ್‌ಕಾರ್ಡ್ ಸ್ವೀಕರಿಸುವ ಸಂಥರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು. |
| **ಪಿ.ಯು.ಸಿ** | • ವಿದ್ಯಾರ್ಥಿಯು ಕಾಲೇಜಿಗೆ ದಾಖಲಾಗುವ | **ಮೊಬೈಲ್‌ನಲ್ಲಿ ಐ.ವಿ.ಆರ್. ಮೂಲಕ** |

<table>
<tr>
<td></td>
<td>
<ul>
<li>ಸಮಯದಲ್ಲಿ ಕಾಲೇಜು ಅಧಿಕಾರಿಗಳಲ್ಲಿ ಬಸ್ ಪಾಸಿಗಾಗಿ ಕೋರುವುದು.</li>
<li>ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಅಂಚೆ ವ್ಯಕ್ತಿಯ ಬಳಿ ಈ ಕೆಳಕಂಡಂತೆ ಪಾವತಿಸುವುದು.</li>
<li>ಸಾಮಾನ್ಯ – ರೂ.1100/–</li>
<li>ಎಸ್‌ಸಿ/ಎಸ್‌ಟಿ–ರೂ.200/–</li>
</ul>
ವಿತರಣೆ:
<ul>
<li>ಕಾಲೇಜಿನ ಅಧಿಕಾರಿಗಳು PU online portal ಸಾಫ್ಟ್‌ವೇರ್ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ, ಬೆಂ.ಮ.ಸಾ.ಸಂಸ್ಥೆಯು ಸ್ಮಾರ್ಟ್‌ಕಾರ್ಡ್‌ಗಳನ್ನು ಮುದ್ರಣಗೊಳಿಸಿ ವಿದ್ಯಾರ್ಥಿಯ ವಿಳಾಸಕ್ಕೆ ಅಂಚೆ ಮೂಲಕ ರವಾನಿಸಲಾಗುವುದು.</li>
<li>ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಸ್ಮಾರ್ಟ್‌ಕಾರ್ಡ್ ಸ್ವೀಕರಿಸುವ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು.</li>
</ul>
</td>
<td>
<ul>
<li>ಮೊಬೈಲ್‌ನಲ್ಲಿ 161 ಕರೆ ಮಾಡುವುದು.</li>
<li>ಕನ್ನಡ ಅಥವಾ ಇಂಗ್ಲೀಷ್ ಆಯ್ಕೆ ಮಾಡಿಕೊಳ್ಳುವುದು.</li>
<li>ಬೆಂ.ಮ.ಸಾ.ಸಂಸ್ಥೆಯ ಸೇವೆಗಳಿಗೆ 6 ನ್ನು ಆಯ್ಕೆ ಮಾಡಿಕೊಳ್ಳುವುದು.</li>
<li>ವಿದ್ಯಾರ್ಥಿ ಪಾಸಿಗಾಗಿ 2 ನ್ನು ಆಯ್ಕೆ ಮಾಡಿಕೊಳ್ಳುವುದು.</li>
<li>ವೆಬ್‌ಲಿಂಕ್ ಮೂಲಕ ವಿದ್ಯಾರ್ಥಿ ರಿಯಾಯಿತಿ ಪಾಸಿನ ಅರ್ಜಿಯನ್ನು ವಿದ್ಯಾರ್ಥಿಯ ಮೊಬೈಲ್‌ಗೆ ರವಾನಿಸಲಾಗುವುದು.</li>
</ul>
ನೇರವಾಗಿ ವೆಬ್‌ಲಿಂಕ್ ಮೂಲಕ:
<ul>
<li>ಪರ್ಯಾಯವಾಗಿ, ವಿದ್ಯಾರ್ಥಿಗಳು www.mybmtc.com ಗೆ ತೆರಳಿ ವೆಬ್‌ಲಿಂಕ್ ಮೂಲಕವು ಅರ್ಜಿಯನ್ನು ಸಲ್ಲಿಸಬಹುದಾಗಿದೆ.<br>ಅರ್ಜಿ ಸಲ್ಲಿಸುವ ಪ್ರಕ್ರಿಯೆ:</li>
<li>ವಿದ್ಯಾರ್ಥಿಗಳು ವೆಬ್‌ಲಿಂಕ್‌ನಲ್ಲಿ ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಪಡೆಯುವುದು.</li>
<li>ಸದರಿ ಇ–ಫಾರಂ ನಲ್ಲಿ ವಿದ್ಯಾರ್ಥಿಗಳು ಎನ್‌ರೋಲ್‌ಮೆಂಟ್ ಸಂಖ್ಯೆಯನ್ನು ಹಾಗೂ ಹುಟ್ಟಿದ ದಿನಾಂಕವನ್ನು ನಮೂದಿಸುವುದು.</li>
<li>ವಿದ್ಯಾರ್ಥಿಯ ಎನ್‌ರೋಲ್‌ಮೆಂಟ್ ಸಂಖ್ಯೆ ಮತ್ತು ಹುಟ್ಟಿದ ದಿನಾಂಕವನ್ನು ನಮೂದಿಸಿದ ಕೂಡಲೇ PU Board ಡೇಟಾಬೇಸ್‌ನಲ್ಲಿನ ವಿದ್ಯಾರ್ಥಿಯ ವಿವರಗಳು ಸ್ವಯಂಚಾಲಿತ ಮುದ್ರಿತವಾಗುತ್ತವೆ.</li>
<li>ಸ್ವಯಂಚಾಲಿತವಾಗಿ ವಿವರಗಳು ಮುದ್ರಿತವಾದ ನಂತರ ವಿದ್ಯಾರ್ಥಿಯು ಸದರಿ ವಿವರಗಳನ್ನು ಪರಿಶೀಲಿಸಿ, ಪೋಷಕರ ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ನಮೂದಿಸುವುದು. ಒಂದು ವೇಳೆ ಸ್ವಯಂಮುದ್ರಿತವಾಗಿರುವ ವಿವರಗಳಲ್ಲಿ ತಪ್ಪಾಗಿದ್ದಲ್ಲಿ ಕಾಲೇಜು ಅಧಿಕಾರಿಗಳ ಬಳಿ ಅದನ್ನು ಸರಿಪಡಿಸಿ ನಂತರ ಅರ್ಜಿ ಸಲ್ಲಿಸುವುದು.</li>
<li>ಸ್ವಯಂಚಾಲಿತವಾಗಿ ಮುದ್ರಿತವಾಗಿರುವ ವಿವರಗಳು ಸರಿಯಾಗಿದ್ದಲ್ಲಿ, ವಿದ್ಯಾರ್ಥಿಯು ಮುಂದಿನ ಅಂಕಣಕ್ಕೆ ತೆರಳಿ ಎಲ್ಲಿಂದ–ಎಲ್ಲಿಗೆ ಮತ್ತು ಮಾರ್ಗದ ಬಸ್ ನಿಲ್ದಾಣವನ್ನು ನಮೂದಿಸುವುದು.</li>
</ul>
</td>
</tr>
</table>

| | | |
|---|---|---|
| | | • ಬಸ್ ನಿಲ್ದಾಣದ ಮಾಹಿತಿಯನ್ನು ನಮೂದಿಸಿದ ನಂತರ 1MB ಗಿಂತಲೂ ಹೆಚ್ಚಿಲ್ಲದ ಭಾವಚಿತ್ರವನ್ನು ಅಪ್‌ಲೋಡ್ ಮಾಡುವುದು.<br>• ಮೇಲ್ಕಂಡ ಎಲ್ಲಾ ಹಂತಗಳು ಮುಕ್ತಾಯವಾದ ನಂತರ ವಿದ್ಯಾರ್ಥಿಯು ಅರ್ಜಿಯನ್ನು ಸಲ್ಲಿಸುವುದು ಹಾಗೂ ಅರ್ಜಿಯ ಸಂಖ್ಯೆಯನ್ನು ಪಡೆಯುವುದು.<br>**ಪಾಸಿನ ಶುಲ್ಕ:**<br>• ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಅಂಚೆ ವ್ಯಕ್ತಿಯ ಬಳಿ ಈ ಕೆಳಕಂಡಂತೆ ಪಾವತಿಸುವುದು.<br>• ಸಾಮಾನ್ಯ – ರೂ.1100/–<br>• ಎಸ್‌ಸಿ/ಎಸ್‌ಟಿ–ರೂ.200/–<br>**ವಿತರಣೆ:**<br>• ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಕಾರ್ಡ್‌ಗಳನ್ನು ವಿದ್ಯಾರ್ಥಿಯ ವಿಳಾಸಕ್ಕೆ ಅಂಚೆಯ ಮೂಲಕ ರವಾನಿಸಲಾಗುವುದು.<br>• ಪಾಸಿನ ಮೊತ್ತವನ್ನು ಸ್ಮಾರ್ಟ್‌ಕಾರ್ಡ್ ಸ್ವೀಕರಿಸುವ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು. |
| **ಕಾಲೇಜು.** | **ಅನ್ವಯಿಸುವುದಿಲ್ಲ.** | **ಮೊಬೈಲ್‌ನಲ್ಲಿ ಐ.ವಿ.ಆರ್. ಮೂಲಕ**<br>• ಮೊಬೈಲ್‌ನಲ್ಲಿ 161 ಕರೆ ಮಾಡುವುದು.<br>• ಕನ್ನಡ ಅಥವಾ ಇಂಗ್ಲೀಷ್ ಆಯ್ಕೆ ಮಾಡಿಕೊಳ್ಳುವುದು.<br>• ಬೆಂ.ಮ.ಸಾ.ಸಂಸ್ಥೆಯ ಸೇವೆಗಳಿಗೆ 6 ನ್ನು ಆಯ್ಕೆ ಮಾಡಿಕೊಳ್ಳುವುದು.<br>• ವಿದ್ಯಾರ್ಥಿ ಪಾಸಿಗಾಗಿ 2 ನ್ನು ಆಯ್ಕೆ ಮಾಡಿಕೊಳ್ಳುವುದು.<br>• ವೆಬ್‌ಲಿಂಕ್ ಮೂಲಕ ವಿದ್ಯಾರ್ಥಿ ರಿಯಾಯಿತಿ ಪಾಸಿನ ಅರ್ಜಿಯನ್ನು ವಿದ್ಯಾರ್ಥಿಯ ಮೊಬೈಲ್‌ಗೆ ರವಾನಿಸಲಾಗುವುದು.<br>**ನೇರವಾಗಿ ವೆಬ್‌ಲಿಂಕ್ ಮೂಲಕ:**<br>• **ಪರ್ಯಾಯವಾಗಿ,** ವಿದ್ಯಾರ್ಥಿಗಳು www.mybmtc.com ಗೆ ತೆರಳಿ ವೆಬ್‌ಲಿಂಕ್ ಮೂಲಕವು ಅರ್ಜಿಯನ್ನು ಸಲ್ಲಿಸಬಹುದಾಗಿದೆ.<br>**ಅರ್ಜಿ ಸಲ್ಲಿಸುವ ಪ್ರಕ್ರಿಯೆ:**<br>• ವಿದ್ಯಾರ್ಥಿಗಳು ವೆಬ್‌ಲಿಂಕ್‌ನಲ್ಲಿ ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಪಡೆಯುವುದು. |

| | | |
|---|---|---|
| | | • ಸದರಿ ಇ–ಫಾರಂ ನ್ನು ವಿದ್ಯಾರ್ಥಿಗಳು ಎನ್‌ರೋಲ್‌ಮೆಂಟ್ ಸಂಖ್ಯೆಯನ್ನು, ಹುಟ್ಟಿದ ದಿನಾಂಕ, ವಿದ್ಯಾರ್ಥಿಯ ಹೆಸರು, ಲಿಂಗ, ತರಗತಿ, ವಿಳಾಸ, ಕಾಲೇಜು ವಿವರ, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸ, ಪ್ರಯಾಣದ ವಿವರ ಹಾಗೂ ಭಾವಚಿತ್ರವನ್ನು ಅಪ್‌ಲೋಡ್ ಮಾಡಿ ಸಲ್ಲಿಸುವುದು.<br>• ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಿಸಿದ ಕಾಲೇಜಿಗೆ ರವಾನಿಸಲಾಗುವುದು.<br>• ವಿದ್ಯಾರ್ಥಿಗಳು ಸಲ್ಲಿಸಿದ ಅರ್ಜಿಯನ್ನು ದೃಢೀಕರಿಸಲು ಕಾಲೇಜುಗಳಿಗೆ ಯುಸರ್‌ನೇಮ್ ಮತ್ತು ಪಾಸ್‌ವರ್ಡ್‌ನ್ನು ನೀಡಲಾಗುವುದು.<br>• ಕಾಲೇಜಿನ ನೋಡಲ್ ಅಧಿಕಾರಿಯು ಕಡ್ಡಾಯವಾಗಿ ಅರ್ಜಿಯನ್ನು ಪರಿಶೀಲಿಸಿ ದೃಢೀಕರಿಸಿ ಸಲ್ಲಿಸುವುದು.<br>**ಪಾಸಿನ ಶುಲ್ಕ:**<br>• ವಿದ್ಯಾರ್ಥಿಗಳು ಅನ್ವಯವಾಗುವ ಪಾಸಿನ ಮೊತ್ತ ಮತ್ತು ಸೇವಾ ಶುಲ್ಕವನ್ನು ಪಾವತಿಸುವುದು.<br>• ಪಾಸಿನ ಮೊತ್ತವನ್ನು ಪಾವತಿಸಲು ಆನ್‌ಲೈನ್‌ನಲ್ಲಿ ಅಥವಾ ಸ್ಮಾರ್ಟ್‌ಕಾರ್ಡ್ ವಿತರಣಾ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.<br>• ಆನ್‌ಲೈನ್ ಮೂಲಕ ಪಾಸಿನ ಮೊತ್ತವನ್ನು ಪಾವತಿಸಿದ್ದಲ್ಲಿ ರೂ.190/– ನ್ನು ಸೇವಾ ಶುಲ್ಕವಾಗಿ ಅಥವಾ ಅಂಚೆ ವ್ಯಕ್ತಿಯ ಬಳಿ ಪಾವತಿಸಿದಲ್ಲಿ ರೂ.200/– ನ್ನು ಸೇವಾ ಶುಲ್ಕವಾಗಿ ಪಾವತಿಸುವುದು.<br>**ವಿತರಣೆ:**<br>• ಸ್ಮಾರ್ಟ್‌ಕಾರ್ಡ್‌ಗಳನ್ನು ವಿದ್ಯಾರ್ಥಿಯ ವಿಳಾಸಕ್ಕೆ ಅಂಚೆಯ ಮೂಲಕ ರವಾನಿಸಲಾಗುವುದು.<br>• ಪಾಸಿನ ಮೊತ್ತವನ್ನು ನಗದಾಗಿ ಪಾವತಿಸುವವರು ಸ್ಮಾರ್ಟ್‌ಕಾರ್ಡ್ ಸ್ವೀಕರಿಸುವ ಸಂಧರ್ಭದಲ್ಲಿ ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು. |

ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸಿಗಾಗಿ ದಿನಾಂಕ:31.07.2018 ರ ಒಳಗಾಗಿ ಅರ್ಜಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

**Issue of Student Passes for the year 2018-19**

**Bengaluru, July 19 (Karnataka Information)**

BMTC is issuing student passes for the convenience of the students at concessional rates. To avoid inconvenience to students like submission of documents and standing in a queue in the bus stands for a long time to obtain passes, BMTC has currently introduced an online system, which is directly integrated with the Education Department database, where student can directly apply through Education Institutions or directly by themselves through e-form. The details of applying for student pass is given below:

**Procedures to be followed to apply for student passes:**

| Type | Through Education Institutions | Directly through e- Form of BMTC |
|---|---|---|
| **Upto 10th Standards** | • At the time of admission, student can directly request the School Authority for BMTC bus pass<br>• Provision has been made in the SATS software to capture the BMTC bus pass request details uploaded by the School Authorities<br>***Pass Fee:***<br>• The student needs to pay the processing amount to the school authority as follows:<br>– Upto 1st to 7th ***– Rs.150/-***<br>***Delivery***<br>• Upon submission of application by the School Authority online through the SATS software, BMTC will print the Smart Card and deliver the same as follows: | ***<u>Through Mobile using IVR options:</u>***<br>• Dial 161 in mobile.<br>• Next Select Kannada or English language.<br>• Next Select 6 for BMTC services.<br>• Select 2 for Student passes<br>• Student pass application will be sent to the student's mobile through weblink<br>***<u>Through direct web link</u>***<br>• Alternatively, the student can also visit www.mybmtc.com and access the weblink for applying for student pass.<br>***<u>Application Process</u>***<br>• Student will obtain the student pass application in the web link<br>• Upon fetching of e-form, the student has to enter the Student enrollment number and Date of Birth.<br>• Once the student enrollment and Date of Birth entered by the student matchesthe SATS database, the system will automatically fetch other required information from the SATS database<br>• Once the auto fetching of information happens, the student needs to verify the information and enter parent's mobile number &email id. *In the event the data fetched is wrong the student needs to get back to the School Authority for correction of data before proceeding.*<br>• If the data fetched is correct, then the student needs to proceed to the next page for entering From, Via and To stops. |

| | | |
|---|---|---|
| | – Upto 7th Standard – To the respective School by BMTC staff<br>– 8th -10th will be directly sent to the student to the addressed mentioned by way of post. Pass fee including processing fee to be paid to the postal department at the time of delivery as follows:<br>▪ Girls -600<br>▪ Boys -800<br>▪ SC/ST-200 | • After entering the bus stops the student will have to upload his photo and the same shall not be more than 1 MB.<br>• After completing all the above steps, the student may submit the application and he will be provided an Application number.<br>***Processing Fee:***<br>• Upto class 7th, the student needs to pay Rs. 200 to the postal department at the time of collection of smart cards.<br>• 8th to 10th the student needs to pay Pass fee including processing fee to the postal department at the time of delivery as follows:<br>▪ Girls -600<br>▪ Boys -800<br>▪ SC/ST-200<br>***Delivery***<br>• For students who apply directly, the smart card will be directly sent to the postal address of the student by post and the pass amount will be collected directly by the Postal Department at the time of delivery |
| **PU Board** | • At the time of admission, student can request for BMTC bus pass to the college Authority.<br><br>***Pass Fee:***<br>• The student needs to pay the processing amount and pass fee directly to the Postal Department as follows:<br>– SC/ST – ***Rs.200/-***<br>– General – ***Rs. 1,100/-***<br><br>***Delivery***<br>• Upon submission of application by the College Authority | ***Through Mobile using IVR options:***<br>• Dial 161 in mobile.<br>• Select Kannada or English language.<br>• Select 6 for BMTC services.<br>• Select 2 for Student passes<br>• Student pass application will be sent to the student's mobile through weblink<br>***Through direct web link***<br>• Alternatively, student can also visit www.mybmtc.com and access the weblink for applying for student pass.<br>***Application Process***<br>• Student will obtain the student pass application in the web link<br>• Upon fetching of e-form, the student has to enter the Student enrollment number and Date of Birth.<br>• Once the student enrollment and Date of Birth entered by the student matches the PU Board database, the system will automatically fetch other required information from the said database<br>• Once the auto fetching of information happens, the student needs to verify the displayed information and enter parent's mobile number & email id. *In the event the data fetched is* |

| | | |
|---|---|---|
| | online through the PU online portal, BMTC will print the smart card and directly send the same to the postal address of the student by way of post<br>• The pass amount including the processing fee will be collected directly by the Postal Department at the time of delivery a | *wrong the student needs to get back to the College Authority for correction of data before proceeding.*<br>• If the data fetched is correct, then the student needs to proceed to the next page for entering From, Via and To stops.<br>• After entering the bus stops the student will have to upload his photo and the same shall not be more than 1 MB.<br>• After completing all the above steps, the student may submit the application and he will be provided an Application number.<br>***<u>Pass Fee:</u>***<br>• The student needs to pay the processing amount and pass fee directly to the Postal Department as follows:<br>– SC/ST – ***Rs.200/-***<br>– General – ***Rs. 1,100/-***<br>***<u>Delivery</u>***<br>• For students who apply directly, the smart card will be directly sent to the postal address of the student by post.<br>• The pass amount including the processing fee will be collected directly by the Postal Department at the time of delivery |
| **College** | N/A | ***<u>Through Mobile using IVR options:</u>***<br>• Dial 161 in mobile.<br>• Select Kannada or English language.<br>• Select 6 for BMTC services.<br>• Select 2 for Student passes<br>• Student pass application will be sent to the student's mobile through weblink<br>***<u>Through direct web link</u>***<br>• Alternatively student can also visit www.mybmtc.com and access the weblink for applying for student pass.<br>***<u>Application Process</u>***<br>• Student will obtain the student pass application in the web link<br>• Upon fetching of e-form, the student has to enter the Student enrollment number ,Date of Birth. Students name, , Sex, Class, Address, College details, Telephone number, e-mail address, travel details and upload the photo and submit.<br>• Filled application will be sent to the concerned college through online.<br>• colleges are provided with user name and pass word to validate the application.<br>• Nodal officer of the college should review the application form and submit the certified application.<br>***<u>Pass Fee:</u>***<br>• The student needs to pay a processing fee Pass charges as applicable<br>• Provision has been enabled to make either online payment or pay by cash at the time of delivery to the Postal Department |

| | | |
|---|---|---|
| | | • In the event of opting for online payment processing fee would be Rs. 190 or else the Student will be charged Rs. 200.<br><br>***<u>Delivery</u>***<br>• The smart card will be directly sent to the postal address of the student by post.<br>• The pass amount including the processing fee will be collected directly by the Postal Department at the time of delivery in the event the Student has opted for cash payment. |

Students should submit their application to avail student concessional pass before 31.07.2018.